**ದಿನಾಂಕಃ 12.12.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಿಂದಃ**

4. 2017 ರಲ್ಲಿ ನಮ್ಮ ಮನೆಯಲ್ಲಿ ಮಲ್ಲಿಕಾರ್ಜುನ ಮತ್ತು ಲಕ್ಷ್ಮೀ @ ನೇತ್ರಾ ಇವರ ಮದುವೆ ನಡೆದಿತ್ತು ಎಂದರೆ ಸರಿ. ಆಗ ಅವರ ಮದುವೆಯ ಲಗ್ನ ಪತ್ರಿಕೆಯನ್ನು ಅಚ್ಚು ಹಾಕಿಸಿದ್ದರು ಎಂದರೆ ಸರಿ. ಆ ಲಗ್ನ ಪತ್ರಿಕೆಯಲ್ಲಿ ನಮ್ಮ ಮನೆತನದ ಹೆಸರು ಸಾಲಮನಿ ಸಾ ಹ್ಯಾಡಾ ಎಂದು ಅಚ್ಚು ಹಾಕಿಸಿದ್ದೇವೆ ಎಂದರೆ ನಮ್ಮ ತಂದೆ ಮತ್ತು ಅವರ ಅಣ್ಣ-ತಮ್ಮಂದಿರು ಸಾಲಾಗಿ ಮನೆಗಳನ್ನು ಕಟ್ಟಿಸಿರುವ ಕಾರಣ ಆಗಿನಿಂದ ಅವರ ಹೆಸರುಗಳ ಮುಂದೆ ಸಾಲುಮನೆ ಎಂದು ಸೇರಿಸಿ ಕರೆಯುತ್ತಾರೆ. ನಿಪಿ 53 ರ ಪ್ರಕಾರ ಬಸವಣ್ಣೆಪ್ಪನ ಮಗ ನಿಂಗಪ್ಪ ಎಂದರೆ ಅದು ನಿಂಗಪ್ಪ ಅಲ್ಲ ಲಿಂಗಪ್ಪ ಇರುತ್ತದೆ. ನಿಪಿ 53 ವಂಶವೃಕ್ಷದಲ್ಲಿ ಬಸವಣ್ಣೆಪ್ಪನ ಮಗ ನಿಂಗಪ್ಪ ಎಂದು ಬರೆಯಿಸಿ ಹಾಕಿ ನಾನೇ ಸಹಿ ಮಾಡಿದ್ದೇನೆ ಎಂದರೆ ನಾನು ಸಲ್ಲಿಸಿಲ್ಲ. ನಿಪಿ 53 ರಲ್ಲಿರುವ ಸಹಿ ನನ್ನದೇ ಎಂದರೆ ಸರಿ ಎಂದಿದ್ದರಿಂದ ಸಹಿಯನ್ನು ನಿಪಿ **53 (ಎ)** ಎಂದು ಗುರುತಿಸಿತು. ನಿಂಗಪ್ಪ ಅಲ್ಲ ಲಿಂಗಪ್ಪ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವಣ್ಣೆಪ್ಪನ ಮಗ ನಿಂಗಪ್ಪನಿಗೆ ಹನುಮಂತಪ್ಪ ಎಂಬ ಮಗನಿದ್ದಾನೆ ಎಂದರೆ ಸರಿ. ಸಾಕ್ಷಿಗೆ ಸದರಿ ಹನುಮಂತಪ್ಪನ ಶಾಲಾ ದೃಢೀಕರಣ ಪತ್ರ ತೋರಿಸಿ ಆತನನ್ನು ಶಾಲೆಗೆ ಸೇರಿಸಿದ 1997-98 ನೇ ಸಾಲಿನಲ್ಲಿ ಸಾಲಮನಿ ಹನುಮಂತಪ್ಪ ತಂದೆ ಸಾಲಮನಿ ನಿಂಗಪ್ಪ ಎಂದು ಹೇಳಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದಿದ್ದರಿಂದ ಆ ದಾಖಲೆಯನ್ನು ನಿಡಿ **1** ಎಂದು ಗುರುತಿಸಿತು. ಸಾಕ್ಷಿಗೆ ಸಾಲಮನಿ ಕೋಟೆಪ್ಪ, ಸಾಲಮನಿ ಬಸಪ್ಪ ಮತ್ತು ಸಾಲಮನಿ ಪಕ್ಕೀರಪ್ಪ ಇವರುಗಳ 1990-91, 1999-2000 ಮತ್ತು 2000-01 ರ ಶಾಲಾ ದೃಢೀಕರಣ ಪತ್ರಗಳಲ್ಲಿ ಹಿಂದಿನಿಂದಲೂ ಸಾಲಮನಿ ಎಂಬ ಮನೆತನದ ಹೆಸರನ್ನೇ ನೀಡಿ ಶಾಲೆಗೆ ಸೇರಿಸಲಾಗಿದೆ ಎಂದರೆ ಸಾಕ್ಷಿಯು ನಮ್ಮ ತಂದೆ ಮತ್ತು ಅಜ್ಜನ ಕಾಲದಿಂದ ಸಾಲಾಗಿ ಮನೆಗಳನ್ನು ಕಟ್ಟಿಸಿದ್ದರಿಂದ ಸಾಲುಮನೆಯವರು ಎನ್ನುತ್ತಿದ್ದರು ಎಂದಿದ್ದರಿಂದ ಸದರಿ ಶಾಲಾ ದೃಢೀಕರಣಗಳನ್ನು ನಿಡಿ **2** ರಿಂದ ನಿಡಿ **4** ಎಂದು ಗುರುತಿಸಿತು.

5. ಸಾಲಮನಿ ಗೋಣೆಪ್ಪ ತಂದೆ ಬಸವಣ್ಣೆಪ್ಪನಿಗೆ ಹೊಳಲು ಗ್ರಾಮದ ಸರ್ವೆ ನಂ.657/1 ರಲ್ಲಿ 4 ಎಕರೆ ಜಮೀನು ಇದೆ ಎಂದರೆ ಸರಿ. ಆ ಜಮೀನಿನ ಪಹಣಿಯಲ್ಲಿ ಕೂಡಾ ಮನೆತನದ ಹೆಸರು ಸಾಲಮನಿ ಗೋಣೆಪ್ಪ ಎಂದೇ ನಮೂದಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆಯ ಕಾಲದಿಂದ ನಮ್ಮ ಮನೆತನಕ್ಕೆ ಸಾಲುಮನಿ ಎಂಬ ಹೆಸರು ಕರೆಯಲು ಪ್ರಾರಂಭ ಮಾಡಿದ್ದಾರೆ ಎಂದು ಹೇಳುತ್ತಾರೆ. ನಮ್ಮ ವಂಶದ ಮೂಲ ಪುರುಷ ನಿಂಗಪ್ಪ ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ನಿಂಗಪ್ಪನ ಹೆಂಡತಿ ಬುಳ್ಳವ್ವ ಇವರ ಮರಣ ಪ್ರಮಾಣ ಪತ್ರ ಪಡೆಯುವಾಗಲೂ ಸಾಲಮನಿ ಬುಳ್ಳವ್ವ ಎಂದೇ ದೃಢೀಕರಣ ಪತ್ರ ಪಡೆದಿದ್ದೇವೆ ಎಂದು ಮರಣ ಪ್ರಮಾಣ ಪತ್ರವನ್ನು ತೋರಿಸಿದರೆ ಸಾಕ್ಷಿಯು ನಾವು ಬಾವಿ ಬುಳ್ಳವ್ವ ಎಂದೇ ಮರಣ ಪ್ರಮಾಣ ಪತ್ರಕ್ಕೆ ಅರ್ಜಿ ಕೊಟ್ಟಿದ್ದೇವೆ ಎಂದು ಹೇಳಿದ್ದು ಮರಣ ಪ್ರಮಾಣ ಪತ್ರದಲ್ಲಿ ದಿನಾಂಕ 14.10.1986 ರಂದು ಸಾಲಮನಿ ಬುಳ್ಳವ್ವ ಮರಣ ಹೊಂದಿದ್ದಾರೆಂದು ನಮೂದಾಗಿರುತ್ತದೆ.

6. ಬಾವಿ ಲಿಂಗಪ್ಪ ತಂದೆ ಗುಡ್ಡಪ್ಪ ಎನ್ನುವವರಿಗೆ ಎಲ್ಲಾ ದಾವಾ ಆಸ್ತಿಗಳು ಸೇರಿರುತ್ತವೆ ಎಂದರೆ ಸುಳ್ಳು. ಬಾವಿ ಲಿಂಗಪ್ಪ ಬಿನ್ ಗುಡ್ಡಪ್ಪ ಇವರಿಗೆ ಗಂಗಮ್ಮ ಎಂಬ ಹೆಂಡತಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಬಾವಿ ಲಿಂಗಪ್ಪ ಮತ್ತು ಗಂಗಮ್ಮನಿಗೆ ಯಾವುದೇ ಸಂತಾನವಿರಲಿಲ್ಲ ಎಂದರೆ ಅವರಿಗೂ ನಮಗೂ ಯಾವುದೇ ಸಂಬಂಧವಿರುವುದಿಲ್ಲ. ಸಾಕ್ಷಿಗೆ ಮತ್ತೆ

ಬಾವಿ ಲಿಂಗಪ್ಪ ಮತ್ತು ಗಂಗಮ್ಮ ದಂಪತಿಗಳಿಗೆ ಯಾವುದೇ ಸಂತಾನ ಇರಲಿಲ್ಲ ಎಂದು ಕೇಳಿದರೆ ಅದರ ಬಗ್ಗೆ ಗೊತ್ತಿಲ್ಲವೆಂದು ಹೇಳಿದ್ದಾರೆ. ಬಾವಿ ಲಿಂಗಪ್ಪನ ಹೆಂಡತಿ ಗಂಗಮ್ಮನಿಗೆ ನೀಲಪ್ಪ ಎಂಬ ತಮ್ಮನಿದ್ದ ಎಂದರೆ ಇರಬಹುದು. ಸದರಿ ನೀಲಪ್ಪನಿಗೆ ಹನುಮಪ್ಪ ಎಂಬ ಮಗನಿದ್ದ ಎಂದರೆ ಇರಬಹುದು. 1 ಮತ್ತು 2 ನೇ ಪ್ರತಿವಾದಿಗಳು ಸದರಿ ಹನುಮಪ್ಪನ ಗಂಡುಮಕ್ಕಳು ಎಂದರೆ ಅವರು ಮೂಲತಃ ಹರವಿ ಗ್ರಾಮದವರು. 3 ನೇ ಪ್ರತಿವಾದಿ ದೇವಕ್ಕ ಸದರಿ ಹನುಮಪ್ಪನ ಮಗಳು ಎಂದರೆ ಸರಿ. ಬಾವಿ ಲಿಂಗಪ್ಪ ಮತ್ತು ಗಂಗಮ್ಮನಿಗೆ ಮಕ್ಕಳು ಇರಲಿಲ್ಲವಾದ್ದರಿಂದ ಗಂಗಮ್ಮನ ಅಳಿಯ ಹನುಮಪ್ಪನೇ ಅವರಿಬ್ಬರ ಸುಖ-ದುಃಖ ಗಳನ್ನು ನೋಡಿಕೊಳ್ಳುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಮಕ್ಕಳಿಲ್ಲದ ಕಾರಣ ಬಾವಿ ಲಿಂಗಪ್ಪ ಮತ್ತು ಗಂಗಮ್ಮ ಹನುಮಪ್ಪನನ್ನು ದತ್ತು ಪುತ್ರನೆಂದು ಸ್ವೀಕಾರ ಮಾಡಿದ್ದರು ಎಂದರೆ ಸುಳ್ಳು. ಆದ್ದರಿಂದ ಅಲ್ಲಿಯವರೆಗೆ ಹರವಿ ಹನುಮಪ್ಪ ಎಂದು ಕರೆಯುತ್ತಿದ್ದ ಪ್ರತಿವಾದಿಗಳ ತಂದೆಯನ್ನು ಆ ನಂತರದಿಂದ ಬಾವಿ ಹರವಿ ಹನುಮಪ್ಪ ಎಂದು ಕರೆಯಲು ಪ್ರಾರಂಭ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಾವಿ ಲಿಂಗಪ್ಪನು ದಿನಾಂಕ 15.02.1965 ರ ನೋಂದಾಯಿತ ಮರಣ ಶಾಸನ ಪತ್ರದ ಪ್ರಕಾರ ಗಂಗಮ್ಮನ ಹೆಸರಿನಲ್ಲಿದ್ದ ಹ್ಯಾರಡಾ ಸರ್ವೆ ನಂ. 8, 10 ಬಿ ಮತ್ತು 170 ಎ ಆಸ್ತಿಗಳನ್ನು ಹನುಮಪ್ಪನಿಗೆ ಬರೆದಿದ್ದರು ಎಂದರೆ ಸುಳ್ಳು. ನೋಂದಾಯಿತ ಮರಣ ಶಾಸನ ಪತ್ರಕ್ಕೆ ಗಂಗಮ್ಮ ಕೂಡಾ ಒಪ್ಪಿಗೆ ನೀಡಿ ಸಾಕ್ಷಿ ಸಹಿ ಮಾಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಎಲ್ಲವೂ ಬಾವಿ ಲಿಂಗಪ್ಪ ಬಿನ್ ಗುಡ್ಡಪ್ಪ ಇವರ ಆಸ್ತಿಗಳಾಗಿದ್ದು ಅವರ ಜೀವಿತಾವಧಿ ವರೆಗೆ ಅವರ ಸ್ವಾಧೀನದಲ್ಲೇ ಇದ್ದವು ಎಂದರೆ ಇಲ್ಲ, ನಮ್ಮ ಸ್ವಾಧೀನದಲ್ಲೇ ಇದ್ದವು. ನಾನು ನಮ್ಮ ಸ್ವಾಧೀನದಲ್ಲಿದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾವಿ ಲಿಂಗಪ್ಪ ದಿನಾಂಕ 16.04.1971 ರಂದು ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಅವರ ಮರಣಾ ನಂತರ ಅವರ ಹೆಂಡತಿ ಗಂಗಮ್ಮನೇ ವಾರಸು ಪ್ರಕಾರ ದಾವಾ ಸ್ವತ್ತುಗಳಿಗೆ ಮಾಲೀಕರಾದರು ಎಂದರೆ ನಮ್ಮ ಆಸ್ತಿಗೆ ನಾವೇ ಮಾಲೀಕರು. ಗಂಗಮ್ಮ ಕೂಡಾ ದಿನಾಂಕ 12.08.1979 ರಂದು ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮ ಮೃತಪಟ್ಟ ನಂತರ ಆಕೆಯ ಏಕೈಕ ವಾರಸುದಾರನಾಗಿ ಪ್ರತಿವಾದಿಗಳ ತಂದೆ ಹನುಮಪ್ಪ ಒಬ್ಬರೇ ಉಳಿದಿದ್ದರು ಎಂದರೆ ನನಗೆ ಗೊತ್ತಿಲ್ಲ. ಗಂಗಮ್ಮನ ಮರಣಾ ನಂತರ ದಾವಾ ಸ್ವತ್ತುಗಳೆಲ್ಲವೂ ವಾರಸು ಪ್ರಕಾರ ಪ್ರತಿವಾದಿಗಳ ತಂದೆ ಹನುಮಪ್ಪನಿಗೆ ಬಂದವು ಎಂದರೆ ಅವರು ಮೋಸ ಮಾಡಿ ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ.

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**